ದಿನಾಂಕ: **30.01.2026** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಪ್ರವಾದಿ ಪರ ಶ್ರೀ. ಜಿ ಹೆಚ್ ಕೆ ವಕೀಲರಿಂದಃ

ದಿಃ 25.10.2024 ರಂದು ಸಿಂಗಟಗೆರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದವರು ನೀಡಿರುವ ಪತ್ರವನ್ನು ನಿಡಿ-15 ಎಂದು, ಸಿಂಗಟಗೆರೆಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದವರು ನೀಡಿರುವ ಧೃಡೀಕಪರಣ ಪತ್ರವನ್ನು ನಿಡಿ-16 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ- ಶ್ರೀ ಬಿ ಆರ್ ವಕೀಲರಿಂದ ಃ

ನಿಡಿ-15 ನ್ನು ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ಬ್ಯಾಂಕಿನವರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಲವನ್ನು ನೀಡಿದ್ದಲ್ಲಿ ಸದರಿ ಸಾಲದ ಖಾತೆಗೆ ನಿರ್ಧಿಷ್ಟ ಸಂಖ್ಯೆಯನ್ನು ನೀಡಲಾಗುತ್ತದೆ ಎಂದರೆ ಸರಿ. ನಿಡಿ-16 ರಲ್ಲಿ ಸಾಲದ ಖಾತೆ ಸಂಖ್ಯೆ ನಮೂದು ಇಲ್ಲಾ ಎಂದರೆ ಸರಿ. ನಿಡಿ-16 ನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ನಮೂದು ಇಲ್ಲಾ ಎಂದರೆ ಸರಿ. ಸರ್ಕಾರದವರು ಕೃಷಿ ಸಾಲವನ್ನು ಮನ್ನಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-15 ಮತ್ತು 16 ನ್ನು ಈ ಪ್ರಕರಣದ ಸಲುವಾಗಿ ಬ್ಯಾಂಕಿನವರೊಂದಿಗೆ ಶರೀಖಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-15 ಕ್ಕೆ ಯಾರು ಹೊರಡಿಸಿರುತ್ತಾರೆ ಎಂದರೆ ಸಾಕ್ಷಿ ಸಂಘದ ಅಧ್ಯಕ್ಷರು ಹೊರಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಪಡೆದ ಸಾಲ ಮನ್ನಾ ಗೊಂಡಿದ್ದರೂ ಸಹ ನಿಡಿ-15 ಮತ್ತು 16 ನ್ನು ಈ ದಾವೆಯ ಸಲುವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.